ಪದವಿ ಪೂರ್ವ ಶಿಕ್ಷಣ ಇಲಾಖೆ

# ದ್ವಿತೀಯ ಪಿಯುಸಿ ಪೂರ್ವ ಸಿದ್ಧತಾ ಪರೀಕ್ಷೆ 2023

**ವಿಷಯ : ಕನ್ನಡ** **ಸಮಯ: 3ಗಂಟೆ 15 ನಿಮಿಷ** **ಗರಿಷ್ಠ ಅಂಕಗಳು: 100**

---

**ಅ – ಬಹು ಆಯ್ಕೆ ಪ್ರಶ್ನೆ ವಿಭಾಗ**

**I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** **10X1=10**

1. ಮಯತನುಜೆ ಎಂದರೆ ಯಾರು?

ಅ) ಸೀತೆ ಆ) ಮಂಡೋದರಿ ಇ) ದ್ರೌಪದಿ ಈ) ಸುದೇಷ್ಣೆ

2) ಗುರು ಹೇಗೆ ವರ್ತಿಸಬಾರದು?

ಅ) ಗುರುವಾಗಿ ಆ) ಚಿಂತಕನಾಗಿ ಇ) ಲಘುವಾಗಿ ಈ) ಮಾರ್ಗದರ್ಶಕನಾಗಿ

3) ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು?

ಅ) ಬೇವಿನ ಮರ ಆ) ಮಾವಿನ ಮರ ಇ) ತೆಂಗಿನ ಮರ ಈ) ಹುಣಸೆ ಮರ

4) ತೈಲ ತೀರಿದ್ದು ಹೇಗೆ ತಿಳಿಯುತ್ತದೆ?

ಅ) ಬತ್ತಿ ತೀರಿದಾಗ ಆ) ದೀಪ ಆರಿದಾಗ ಇ) ಕಮಟು ವಾಸನೆ ಬಂದಾಗ ಈ) ಕತ್ತಲಾದಾಗ

5) ವಾಲ್‌ಪರ್ರೈಗೆ ಬಂದ ಬ್ರಿಟೀಷ್ ಪ್ರಜೆ ಯಾರು?

ಅ) ಕಾರ್ಲ್‌ಮಾರ್ಕ್ಸ್ ಆ) ಕಾರ್ವೆರ್ ಮಾರ್ಷ್ ಇ) ಕಾರ್ಲ್‌ಮಾರ್ಷ್ ಈ) ಮಿಚೆಲ್ ಮಾರ್ಷ್

6) ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು?

ಅ) ಬೌದ್ಧ ಧರ್ಮ ಆ) ಸಿಖ್ ಧರ್ಮ ಇ) ಜೈನ ಧರ್ಮ ಈ) ಹಿಂದೂ ಧರ್ಮ

7) ಕಲಾಂ ಅವರ ಆತ್ಮಚರಿತ್ರೆಯ ಹೆಸರೇನು?

ಅ) ನೆನಪಿನ ದೋಣಿಯಲ್ಲಿ ಆ) ಕಲಾಂ ಮೇಷ್ಟ್ರು ಇ) ಚಂದ್ರಯಾನ ಈ) ವಿಂಗ್ಸ್ ಆಫ್ ಫೈರ್

8) ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು?

ಅ) ಇನಾಮು ಆ) ಕೊಡಲಿ ಇ) ಕಾಫಿ ಬೀಜ ಈ) ಏಲಕ್ಕಿ

9) ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರೇನು?

ಅ) ರೆಹಮಾನ್ ಸಾಹೇಬ್ರು ಆ) ಜಬ್ಬಾರ ಸಾಹೇಬ್ರು ಇ) ಜುಬೇದಾ ಈ) ಖಾನ್ ಸಾಹೇಬ್ರು

10) ಫಾರೆಸ್ಟರ್ ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದನು?

ಅ) ಶಿಕಾರಿ ಗಂಡಿ ಆ) ಫಾರೆಸ್ಟ್ ಗೇಟ್ ಇ) ಕಾವಲು ಗುಂಡಿ ಈ) ಸಾಮಿಲ್ಲಿನ ಹತ್ತಿರ

**(ಆ) 11. ಹೊಂದಿಸಿ ಬರೆಯಿರಿ.** **5X1=5**

| | |
|---|---|
| ಅ. ಕುಮಾರವ್ಯಾಸ | 1. ಜಾಲಿಯ ಮರದಂತೆ |
| ಆ. ಹರಹರಾ ಶ್ರೀ ಚೆನ್ನಸೋಮೇಶ್ವರಾ | 2. ದ. ರಾ. ಬೇಂದ್ರೆ |
| ಇ. ಪುರಂದರದಾಸರು | 3. ಗದುಗಿನ ಭಾರತ |
| ಈ. ಬೆಳಗುಜಾವ | 4. ಸುಕನ್ಯಾ ಮಾರುತಿ |
| ಉ. ಒಮ್ಮೆ ನಗುತ್ತೇವೆ | 5. ಪುಲಿಗೆರೆ ಸೋಮನಾಥ |

(ಇ) 12. ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **5X1=5**

(ಬೆಳ್ಳಿಲೋಟ, ಸೀತಾ, ಮನೋರಮೆ, ತಿಮ್ಮಪ್ಪ, ಚಹಾ)

ಕ) 'ಮುಟ್ಟಿಸಿಕೊಂಡವನು' ಕತೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಯ ವೈದ್ಯರ ಹೆಸರು _______

ಚ) ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ______ ನೆನಪಾಗುತ್ತಾರೆ.

ಟ) ಧಣಿಗಳ ದಾಂಪತ್ಯಕ್ಕೆ _______ ಮೂಕಸಾಕ್ಷಿಯಾಗಿತ್ತು.

ತ) ಕನ್ನಡವು ಕಸ್ತೂರಿಯಲ್ಲವೆ ಎಂದವರು ________

ಪ) ಕಲಿಯುಗದ ಅಮೃತ _______

## ಆ-ವಿಭಾಗ

II. (ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **4X2=8**

13. ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ ?
14. ಜಾಲಿಯಮರದ ನಿರರ್ಥಕತೆಯನ್ನು ಕೀರ್ತನಕಾರರು ಹೇಗೆ ತಿಳಿಸಿದ್ದಾರೆ ?
15. ಮುಂಬೈ ನಗರದ ಅವಸರದ ಜೀವನಕ್ಕೆ ಎರಡು ಉದಾಹರಣೆ ನೀಡಿ.
16. ಮುದುಕ ಏನೆಂದು ಗೋಗರೆಯುತ್ತಾನೆ ?
17. ಕವಯಿತ್ರಿ ಮುಗಿಲತ್ತ ಕೈಚಾಚಿ ಏಕೆ ನಿಂತಿದ್ದಾರೆ ?

(ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **3X2=6**

18. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?
19. ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?
20. ಸಂಸ್ಕೃತ-ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ?
21. ವೀರೇಂದ್ರ ಸಿಂಪಿಯವರು ಹೇಳುವಂತೆ ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ?ಅದು ಹೇಗೆ?

(ಇ)ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **4X2=8**

22. ಕೃಷ್ಣೇಗೌಡನ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
23. ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ?
24. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು?ಯಾರು?
25. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?
26. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ-ವಿಭಾಗ

III.(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ,ಸ್ವಾರಸ್ಯ ಬರೆಯಿರಿ. **2X3=6**

27. "ಅಸಾಧ್ಯಮಪ್ಪ ಮರುವಕ್ಕಮಿಲ್ಲ"
28. "ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು"
29. "ತುಂಬಿರುವ ತನಕ ತುಂತುಂಬಿ ಕುಡಿಯಬೇಕು"

(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. 1X3=3

30. ನಮ್ಮ ಭಾಷೆಯಲ್ಲಿ ಓದಿದ್ದೆ ಮೈಗೆ ಹತ್ತುವುದು.

31. ವಿಜ್ಞಾನದ ಅಡಿಪಾಯವೇ ಪ್ರಶ್ನೆ ಕೇಳುವುದು.

(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. 1X3=3

32. ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ.

33. ಕಂಬದ ಮೇಲೆ ಯಾಕೋ ಕೈಲಾಸ ಕಂಡ ಹಾಗೆ ಇದೆಯಲ್ಲ.

## ಈ – ವಿಭಾಗ

IV. (ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2X4=8

34. ಬಸವಣ್ಣನವರ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು?

35. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

36. ಸಕಾಲಕ್ಕೆ ಒದಗುವ ಸಹಾಯವೇ ಶ್ರೇಷ್ಠ ಎಂಬುದನ್ನು ಕವಿ ಹೇಗೆ ತಿಳಿಸಿದ್ದಾರೆ?

37. 'ಬಂಗಾರ ನಿನಗೆ ಸ್ಥಿರವಲ್ಲ' ಎಂಬ ಮಾತಿನ ಸ್ವಾರಸ್ಯವನ್ನು ವಿವರಿಸಿರಿ.

(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1X4=4

38. ಕಣ್ಣುನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದ್ದು?

39. ಕಮಲಾ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಿದ್ದೇಕೆ? ವಿವರಿಸಿ.

40. ಧಣಿ ಹಾಗೂ ಹೊಳೆಯ ನಡುವಿನ ಸಮರವನ್ನು ಚಿತ್ರಿಸಿರಿ.

(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1X4=4

41. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗುಹಾಕಲು ಮಠದವರು ಹವಣಿಸಿದ್ದೇಕೆ?

42. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ? ಚರ್ಚಿಸಿ.

43. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

## ಉ – ವಿಭಾಗ

V. (ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. 1X5=5

44.

ಜಾನಕಿ ಮೂರ್ಛಿತೆಯಾಗೆ ದ
ಶಾನನನನುಕಂಪೆ ಪುಟ್ಟಿ ಕರುಣಿಸಿ ತನ್ನಂ
ತಾನೆ ಪಳಿದುಳಿದು ಕರ್ಮಾ
ಧೀನ ಸಮುತ್ಪನ್ನದುರಘ ದುಷ್ಪರಿಣತಿಯಂ.

**ಅಥವಾ**

ಕ್ರಿಸ್ಮಸ್ ಹೊತ್ತು ತಂದಿದೆ ಈ ಮನೆಗೆ,
ಕೇಕು, ಚಳಿ, ನಕ್ಷತ್ರದೀಪ;
ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ
ಕರುಣಿಸಿದೆ ಗಿಡದ ರೂಪ;
ಅದಕ್ಕೆ ಮಂಜಿನ ಕೆಲಸ ಮಾಡಿದೆ ಹತ್ತಿ,
ಸ್ಕರ್ಟಿನ ಹುಡುಗಿಯ ಮೊಣಕಾಲಲ್ಲಿ
ಬೆಚ್ಚಗಾಗಿದೆ ಮೋಂಬತ್ತಿ.

## ಭಾಷಾಭ್ಯಾಸ

**VI. (ಅ) ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಸೂಚನೆಗನುಗುಣವಾಗಿ ಉತ್ತರಿಸಿ.** **6X2=12**

45. ಈ ಕೆಳಗಿನ ಎರಡು ಪದಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ.

ಕಾಂತಾರ, ಕಲಹ, ಮರ್ಕಟ

46. ಈ ಕೆಳಗಿನ ಎರಡು ಪದಗಳಿಗೆ ತದ್ಭವ ರೂಪ ಬರೆಯಿರಿ.

ಅಗ್ನಿ, ಯಶ, ಘೂಕ

47. ಈ ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯ ಮಾಡಿ ಬರೆಯಿರಿ.

ದಾರಿದೀಪ, ತಲೆಬಾಗು, ಗಾಳಿಸುದ್ದಿ

48. ಈ ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.

ಅಡಿ, ಕಳೆ, ಬಟ್ಟೆ

49. ಈ ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.

ವಕ್ತ್ರಪದ್ಮ, ಹುಸಿನಿದ್ದೆ, ಕಿರುಹಾದಿ

50. ಈ ಕೆಳಗಿನ ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿರಿ.

ಕೀರ್ತಿಗೆ, ಗದ್ಯದೊಳ್, ಮೊಮ್ಮಗಳನ್ನು

51. ಈ ಕೆಳಗಿನ ಎರಡು ಪದಗಳಿಗೆ ನಿಷೇದಾರ್ಥಕ ರೂಪಗಳನ್ನು ಬರೆಯಿರಿ.

ಆಡಿದರು, ಹಾಡಿದಳು, ತಿಂದನು

**(ಆ) ಯಾವುದಾದರೂ ಒಂದು ವಿಷಯ ಕುರಿತು ಪ್ರಬಂಧ ಬರೆಯಿರಿ.** **1X5=5**

52. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮಹತ್ವ

ಅಥವಾ

ಕೃಷಿ ಸಂಸ್ಕೃತಿ ಮತ್ತು ಜಾಗತೀಕರಣ

**(ಇ) ಪತ್ರಲೇಖನ : ಇವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ.** **1X4=4**

53. ನಿಮ್ಮ ಕಾಲೇಜಿನ ವಾರ್ಷಿಕೋತ್ಸವವನ್ನು ಕುರಿತು ಸ್ನೇಹಿತರಿಗೊಂದು ಪತ್ರ ಬರೆಯಿರಿ.

ಅಥವಾ

ಸಮರ್ಪಕ ವಿದ್ಯುತ್ ಪೂರೈಸುವಂತೆ ವಿನಂತಿಸಿ ವಿದ್ಯುತ್ ಇಲಾಖೆಯ ಮುಖ್ಯಸ್ಥರಿಗೆ ಪತ್ರ ಬರೆಯಿರಿ.

**(ಈ) ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.** **1X4=4**

54. ತಾಳಿದವನು ಬಾಳಿಯಾನು

**ಅಥವಾ**

ಕೂತು ಉಂಡರೆ, ಕುಡಿಕೆ ಹೊನ್ನು ಸಾಲದು.

~~~*~~~
~~~